ಮೊಗ್ಗಿನಂತಹ ಮೂಗನ್ನು ಉಳ್ಳ ದುಂಡು ಮುಖದ, ಹೊಳೆವ ಕಣ್ಣುಗಳ ಸ್ಫುರದ್ರೂಪಿ ಯುವತಿ ಮರಳುಗಾಡಿನ ಮಧ್ಯದಿಂದ ಎದ್ದು ಬಂದು ಇವನನ್ನು ಅಪ್ಪಿಕೊಳ್ಳುವಳು. ಪಾರದರ್ಶಕ ವಸ್ತ್ರದಲ್ಲಿ ಇದ್ದ ಅವಳು ಒದ್ದೆಯಾಗಿರುವಳು. ಇಬ್ಬರು ಜೊತೆಯಲ್ಲಿ ಸಾಗುವರು. ಕನಸಿನಲ್ಲಿ ಅವಳ ಜೊತೆ ಇರುವಾಗ ಅವನ ಮೂಗು ಎಲ್ಲರಂತೆ ಸಹಜವಾಗಿ ಇರುವುದು. ಯಾವುದಾದರೂ ಒಂದು ಕಲ್ಲಿನ ತುದಿಯ ಮೇಲೋ ಮರದ ದಿಮ್ಮಿಯ ಮೇಲೋ ನಿಂತುಕೊಂಡಿರುವಂತೆ ಖಾಲಿ ಅಂತರಿಕ್ಷದಲ್ಲಿ ನಿಂತುಕೊಳ್ಳುವರು. ಆಗ ಅವರ ಮೈ ಮೇಲೆ ಒಂದು ತುಣುಕು ಬಟ್ಟೆಯೂ ಇರುವುದಿಲ್ಲ. ಅವಳು ಎರಡೂ ಕೈಗಳನ್ನು ಅಗಲ ಚಾಚಿ ನಿಂತುಕೊಳ್ಳುವಳು. ಅವಳ ಹಿಂದೆ ಅವಳ ಮೈಗೆ ಒತ್ತಿಕೊಂಡು ಇವನು ನಿಂತುಕೊಳ್ಳುವನು. ಆಗ ಅವಳ ಬಲಗೈಯ ಉಂಗುರುದ ಬೆರಳು ಇದ್ದಿಲಿನಷ್ಟು ಕಪ್ಪಾಗಿ ಕಾಣುವುದು. ಇಡೀ ಮೈಯಿ ಸಂಪಿಗೆಯ ಬಣ್ಣದಿಂದ ಕೂಡಿದೆ. ಆದರೆ ಒಂದೇ ಒಂದು ಬೆರಳು ಮಾತ್ರ ಇದ್ದಿಲಿನ ಬಣ್ಣ.

ಥೇ, ಬಿದ್ದರೆ ಕ್ಷಣದಲ್ಲೇ ಜೀವ ಹಾರಿಹೋಗುವುದು. ಹೋಗುವುದು ಇದ್ದದ್ದೆ ಒಂದು ದಿನ. ಇದ್ದರೆ ಕನಸುಗಳನ್ನಾದರೂ ಕಾಣಬಹುದು. ಜೀವ ಹೋದರೆ ಕನಸುಗಳೆಲ್ಲಿ ಎಂದುಕೊಂಡು ಕಿಟಕಿಯ ತುದಿಯಿಂದ ಮೆಲ್ಲನೆ ಇಳಿದ.

ಆಸ್ಪತ್ರೆಯಲ್ಲಿ ಅವನ ಪ್ರಾಣವನ್ನು ರಕ್ಷಿಸಿದ ರೊಮ್ಯಾಂಟಿಕ್ ಕನಸನ್ನು ಒಂದು ದಿನ ಅವನ ಹೆಂಡತಿಗೆ ಹೇಳಿದ. 'ಸೌಂದರ್ಯವೆನ್ನುವುದು ನೇಣುಗಂಬ. ನಿನ್ನ ಕನಸಿನ ಬೀಜ ವಾಸ್ತವದಲ್ಲೇ ಇದೆ. ನಿನ್ನೊಳಗೆ ತಾನು ಸುಂದರವಾಗಿರಬೇಕು, ಎಲ್ಲರೂ ನೋಡಿ ನನ್ನನ್ನು ಆಕರ್ಷಣೆಗೆ ಒಳಗಾಗಬೇಕು ಎನ್ನುವ ಸ್ವರತಿಯ, ದುರಾಲೋಚನೆಯ ಸುಳಿಯಲ್ಲಿ ಸಿಕ್ಕಿ ಹಾಕಿಕೊಂಡಿರುವೆ. ಆ ಸುಳಿಯಿಂದ ಹೊರಬಂದರೆ, ನಿನ್ನ ಮೂಗಿನ ಸಮಸ್ಯೆ ಬಗೆಹರಿಯುತ್ತೆ. ಎಲ್ಲರಂತೆ ನಿನ್ನ ಮೂಗು ನಿನಗೆ ಕಾಣುತ್ತೆ. ಇರುವುದನ್ನು ಒಪ್ಪಿಕೊಳ್ಳಲೇಬೇಕು ಇದು, ವಾಸ್ತವ. ನೀನು ಸುಮ್ಮನೆ ಖಿಲಾಟ ಆಡಬೇಡ, ಇದು ಜೀವನದ ಪ್ರಶ್ನೆ ಐತೆ, ಭ್ರಮೆಗಳ ಕಳಚಿಕೋ ಫಸ್ಟ್' ಎಂದು ಖಾರವಾಗಿ ಅವನ ಮುಖವನ್ನು ನೋಡಿ ಅಂದಳು. ಮತ್ತು ಮುಂದುವರೆದು, 'ನಿನಗೆ ಬಿದ್ದ ಕನಸು ವಾಸ್ತವದಲ್ಲಿನ ನಿನ್ನ ಅತೃಪ್ತಿಯನ್ನು ಸೂಚಿಸುತ್ತೆ, ಆ ಕನಸು ನಿನ್ನನ್ನು ಬದುಕಿಸಿರಬಹುದು, ಆದರೆ ಬದುಕಲು ವಾಸ್ತವವೇ ನೆಲೆ, ನೆಲ ಅಲ್ಲವೇ?' ಎಂದಳು ಗಂಭೀರ ಧ್ವನಿಯಲ್ಲಿ.

ಅವಳ ಆ ಮಾತುಗಳು ಅವನನ್ನು ಆವರಿಸಿಕೊಂಡಂತೆ ಇದ್ದವು. ಸಹಜತೆಯ ಲಯಕ್ಕೆ ತನ್ನ ಬದುಕನ್ನು ತರತೊಡಗಿದ. ಆದರೆ, ತೀರ ಇತ್ತೀಚೆಗೆ, ಒಂದು ಮಧ್ಯಾಹ್ನ, ಅವೊತ್ತು ಭಾನುವಾರ, ಮನೆಯ ವರಾಂಡದಲ್ಲಿ ಅಂಗಾತ ಮಲಗಿದ್ದ. ಮನೆಯ ಮುಂದಿನ ಮಾವಿನ ಮರದ ತುಂಬೆಲ್ಲ ಮಾವಿನ ಹೂವಿನ ಮೊಗ್ಗು. ಜೇನು ಹುಳುಗಳು ಬಂದು ಹೋಗುವುದನ್ನು ಮಾಡಲು ಆರಂಭಿಸಿದ್ದವು. ಮಧ್ಯಾಹ್ನದ ಊಟವನ್ನು ಮುಗಿಸಿದವನು ಸಾಪ್ತಾಹಿಕವೊಂದನ್ನು ಹಿಡಿದುಕೊಂಡಿದ್ದ. ಹದಿನೈದು ಇಪ್ಪತ್ತು ನಿಮಿಷಗಳು ಆಗಿರಬಹುದು. ಪೇಪರ್ ಅವನ ಎದೆಯ ಮೇಲೆ ಹರಡಿಕೊಂಡಿದೆ. ಅವನ ಬಿಟ್ಟ ಕಣ್ಣುಗಳು ಬಿಟ್ಟಹಾಗೆ ಇವೆ. ಮನೆಯ ಯಾವುದೋ ಸಂದಿಯಿಂದ ಸೂರ್ಯನ ಬಿಸಿಲ ಕೋಲು ತುಸು ಅಗಲವಾಗಿ ಅವನ ಮುಖದ ಮೇಲೆ ಬಿದ್ದಿದೆ. ಅವನ ಕಣ್ಣುಗಳು ಅದನ್ನೇ ನೋಡುತ್ತಿವೆ. ನೋಟ ಅದರತ್ತನೇ ನೆಟ್ಟಿದೆ. ಅಲ್ಲಿ ಆ ಬಿಸಿಲಕೋಲಿನ ಒಳಗೆ, ಒಬ್ಬ ಮಧ್ಯಮ ವಯಸ್ಕ ಮಹಿಳೆ. ಎರಡೂ ಮೋಟಾದ ಕೈಗಳು. ಅಂದರೆ ಎರಡೂ ಕೈಗಳಿಗೆ ಮೊಣಕೈಗಳೇ ಇಲ್ಲ. ಮೂಗಿನ ಜಾಗ ಖಾಲಿ. ಎರಡೇ ಎರಡು ರಂಧ್ರಗಳು. ಅವುಗಳ ಬಳಿ ತನ್ನ ಮೋಟು ಕೈಗಳಿಂದ ಕೊಳಲನ್ನು ಹಿಡಿದುಕೊಂಡು ಸುಶ್ರಾವ್ಯವಾಗಿ ಯಾವುದೋ ರಾಗವೊಂದನ್ನು ಹೊಮ್ಮಿಸುತ್ತಿದ್ದಾಳೆ. 'ಅರೆ ಮೂಗೇ ಇಲ್ಲ ಮೂಗೇ ಇಲ್ಲ' ಎಂದು ಕೂಗಿಕೊಳ್ಳುತ್ತ ರಭಸದಲಿ ಎದ್ದು ಕೂತ. ಕಪ್ಪುಮೂಗಿನವನ ಹೆಂಡತಿ ಅಂಗಳದಲ್ಲಿನ ಬಟ್ಟೆ ಒಣ ಹಾಕುವ ತಂತಿಯ ಮೇಲೆ ತರಾವರಿ ಬಣ್ಣಗಳ ಸೀರೆಯ ಫಾಲ್ ಗಳನ್ನು ಒಣ ಹಾಕುತ್ತಿದ್ದಳು. ಇನ್ನು ನೀರು ಅವುಗಳಲ್ಲಿ ಜಿನುಗುತ್ತಿತ್ತು. ತಿರುಗಿ ಅವನ ಮೂಗನ್ನೇ ದಿಟ್ಟಿಸಿದಳು. ಅವನು ಮತ್ತೊಂದು ಸಲ 'ಮೂಗೇ ಇಲ್ಲ, ಮೂಗೇ ಇಲ್ಲ' ಎಂದ. ಅವಳು ಅವನ ಮೂಗನ್ನೇ ದಿಟ್ಟಿಸಿ ನೋಡುತ್ತಿದ್ದಳು. ಈಗ ಅವನು ಅವಳ ಕಡೆ ತಿರುಗಿದ. ಅವಳು ಅವನ ಕರಿಮೂಗನ್ನೇ ದಿಟ್ಟಿಸಿ ನೋಡುತ್ತ ನಿಂತಿದ್ದಳು. ●